**OS No. 126/2021**
**PW-1**

ಸಾಕ್ಷಿಯನ್ನು ದಿಃ **14.02.2022** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಜೆ ಬಿ ಆರ್ ವಕೀಲರಿಂದಃ

ಚೈತ್ರ ಬಿನ್ ಲೇಟ್ ಮಹದೇವಯ್ಯ, ವಯಸ್ಸು **27** ವರ್ಷ, ನಾನು ಈ ದಾವೆಯಲ್ಲಿ **4** ನೇ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ. ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದ್ದೇ ಆಗಿರುತ್ತದೆ. ಈ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಹದೇವಯ್ಯ ಅವರ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ನಿಪಿ-**1** ಎಂದು, ಸರ್ವೆ ನಂಬರ್ **285/1** ಡಿ ಆಸ್ತಿಗೆ ಸಂಬಂದಿಸಿದ ಒಂದು ಆರ್ ಟಿ ಸಿ ನಿಪಿ-**2**, ದಾವಾ ಆಸ್ತಿಗೆ ಸಂಬಂದಿಸಿದ ಡಿಮ್ಯಾಂಡ್ ರಿಜಿಸ್ಟರ್ ಎಕ್ಸಟ್ರಾಕ್ಟ ನಿಪಿ-**3** ಎಂದು, ದಿನಾಂಕಃ **04.03.2006** ನೇ ಇಸವಿಯ ನೊಂದಾಯಿತ ಕ್ರಯ ಪತ್ರದ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದು ನಿಪಿ-**4** ಎಂದು, ಎರಡು ಡಿಮ್ಯಾಂಡ್ ರಿಜಸ್ಟರ್ ಎಕ್ಸಟ್ರಾಕ್ಟನ್ನು ಹಾಜರು ಪಡಿಸಿದ್ದು ನಿಪಿ-**5** ಮತ್ತು **6** ಎಂದು, ದಿನಾಂಕಃ **12.04.2021** ರ ಟಿ. ನರಸಿಪುರ ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ಅವರ ನ್ಯಾಯಾಲಯದಿಂದ ನೀಡಿರುವ ಆದೇಶದ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದು ನಿಪಿ-**7** ಎಂದು, ದಿನಾಂಕಃ **17.05.2021** ರಲ್ಲಿ ತಲಕಾಡು ಗ್ರಾಮ ಪಂಚಾಯತಿ ಕಾರ್ಯಾಲಯದಿಂದ ನೀಡಿರುವ ಒಂದು ಹಿಂಬರಹವನ್ನು ಹಾಜರು ಪಡಿಸಿದ್ದು ನಿಪಿ-**8** ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿದ ನಂತರ, ಓದಿ ಹೇಳಿದ ಮೇರೆಗೆ ಸಾಕ್ಷಿ ಸರಿ ಇದೆ ಎಂದು ಒಪ್ಪಿ ತಮ್ಮ ಸಹಿ ಮಾಡಿರುತ್ತಾರೆ.)

ಓ ಹೇ ಕೇ ಸ ಇದೆ

**OS No. 126/2021**
**PW-1**

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ. ತಿ.ನರಸೀಪುರ